ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp.127-135.
©*IIMRD*, Mysuru

IIMRD JOURNALS

www.iimrd.com

# ಚಾಮರಾಜನಗರ ಜಿಲ್ಲೆಯ ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು: ಒಂದು ಅಧ್ಯಯನ

**ಡಾ. ಹನುಮಂತಯ್ಯ ಬಿ.ಎಚ್.**

ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ, ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ಸಾರಾಂಶ (Abstract)

*ಭಾರತವು ವಿವಿಧ ಜಾತಿ, ಬುಡಕಟ್ಟು ಜನಾಂಗ, ಧರ್ಮ, ಸಮಾಜ, ಸಂಸ್ಕೃತಿ ಮತ್ತು ಆರ್ಥಿಕ ಪದ್ಧತಿಯನ್ನು ಒಳಗೊಂಡಿರುವ ರಾಷ್ಟ್ರವಾಗಿದೆ. ಭಾರತದಲ್ಲಿ ಸ್ವಾತಂತ್ರ್ಯ ನಂತರ ವಿವಿಧ ಲಕ್ಷಣಗಳ ಆಧಾರದ ಮೇಲೆ 705 ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಸಮುದಾಯಕ್ಕೆ ಸೇರಿಸಲಾಗಿದೆ. ಈ ಸಮುದಾಯಗಳು ಸಾಮಾನ್ಯವಾಗಿ ತಮ್ಮದೇ ಆದ ಆಚಾರ–ವಿಚಾರ, ಉಡುಗೆ–ತೊಡುಗೆ, ಆಹಾರ ಪದ್ಧತಿ ಮತ್ತು ನಂಬಿಕೆಗಳೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಬುಡಕಟ್ಟೇತರ ಸಮುದಾಯಗಳಿಗೆ ಹೋಲಿಸಿದಾಗ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಈ ಸಮುದಾಯಗಳು ತುಂಬಾ ಹಿಂದುಳಿದಿವೆ. 705 ಬುಡಕಟ್ಟು ಸಮುದಾಯಗಳಲ್ಲಿ 75 ಸಮುದಾಯಗಳನ್ನು PVTG (ನಿರ್ದಿಷ್ಟವಾಗಿ ಹಿಂದುಳಿದಿರುವ ಬುಡಕಟ್ಟು ಗುಂಪುಗಳು) ಪಟ್ಟಿಗೆ ಸೇರಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ನೆಲೆಸಿರುವ ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಚಾಮರಾಜನಗರ, ಬುಡಕಟ್ಟು, ಸೋಲಿಗ, ಸಾಮಾಜಿಕತೆ, ಆರ್ಥಿಕತೆ.*

## ಪೀಠಿಕೆ

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಬುಡಕಟ್ಟು ಸಮುದಾಯಗಳನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲದಿಂದ ಕಾಲಕ್ಕೆ ವಿವಿಧ ರೀತಿಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಆದರೆ ಈ ಸಮುದಾಯಗಳ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಾಗಿಲ್ಲ ಎಂಬುದನ್ನು ಸರ್ಕಾರದ ಅಂಕಿ–ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.

*Please cite this article as: ಡಾ. ಹನುಮಂತಯ್ಯ ಬಿ.ಎಚ್. (2022). ಚಾಮರಾಜನಗರ ಜಿಲ್ಲೆಯ ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು: ಒಂದು ಅಧ್ಯಯನ. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.127–135.*

ಅಭಿವೃದ್ಧಿ ಹೆಸರಿನಲ್ಲಿ ಅನುಷ್ಠಾನಗೊಳಿಸಿದ ಹಲವಾರು ಯೋಜನೆಗಳು ಬುಡಕಟ್ಟು ಜನರ ಜೀವನಕ್ಕೆ ಮಾರಕವಾಗಿ ಪರಿಣಮಿಸಿದವು. ಕಾಯ್ದೆಗಳು ಅನುಷ್ಠಾನಕ್ಕೆ ಬರುವ ಮುಂಚೆ ಬುಡಕಟ್ಟು ಜನರು ಅರಣ್ಯ ಪ್ರದೇಶದೊಳಗೆ ಮತ್ತು ಅರಣ್ಯದಂಚಿನಲ್ಲಿ ಅಗತ್ಯಕ್ಕೆ ತಕ್ಕಷ್ಟು ಅರಣ್ಯ ಉತ್ಪನ್ನಗಳನ್ನು ಬಳಸಿಕೊಂಡು ಸ್ವಯಂ ಸಂಪೂರ್ಣ ಜೀವನವನ್ನು ನಡೆಸುತ್ತಿದ್ದರು. ವಿವಿಧ ಕಾಯ್ದೆಗಳು ಅನುಷ್ಠಾನಕ್ಕೆ ಬಂದ ನಂತರ ಅರಣ್ಯದೊಳಗೆ ವಾಸಿಸುತ್ತಿದ್ದ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಆದರೆ ಆ ಪುನರ್‌ವಸತಿ ಕೇಂದ್ರಗಳು ಮೂಲ ಸೌಲಭ್ಯಗಳ ಕೊರತೆಯಿಂದಾಗಿ ಬುಡಕಟ್ಟು ಜನರು ಸಂಕಷ್ಟದ ಜೀವನವನ್ನು ಸಾಗಿಸುವಂತಾಯಿತು. ಪ್ರಸ್ತುತ ಶೇ.90ಕ್ಕಿಂತಲೂ ಹೆಚ್ಚು ಬುಡಕಟ್ಟು ಜನರು ಕೂಲಿ ಕಾರ್ಮಿಕರಾಗಿ ದುಡಿದು ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದಿರುವ ಜಿಲ್ಲೆಯಾದ ಚಾಮರಾಜನಗರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಾಮರಾಜನಗರ ಜಿಲ್ಲೆಯು ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದು, 5,101 ಚ.ಕಿ.ಮೀ. ವಿಸ್ತೀರ್ಣದಲ್ಲಿ ಚಾಮರಾಜನಗರ, ಕೊಳ್ಳೆಗಾಲ, ಯಳಂದೂರು, ಹನೂರು ಮತ್ತು ಗುಂಡ್ಲುಪೇಟೆ ತಾಲೂಕುಗಳನ್ನು ಒಳಗೊಂಡಿದೆ. ಚಾಮರಾಜನಗರ ಜಿಲ್ಲೆಯಲ್ಲಿ 2011ನೇ ಜನಗಣತಿ ಪ್ರಕಾರ 5,12,231 ಪುರುಷ ಮತ್ತು 5,08,560 ಮಹಿಳೆಯರನ್ನೊಳಗೊಂಡಂತೆ 10,20,791 ಜನಸಂಖ್ಯೆಯನ್ನು ಹೊಂದಿದ್ದು, ಒಟ್ಟು ಜನಸಂಖ್ಯೆಯಲ್ಲಿ 11.78% ಪರಿಶಿಷ್ಟ ಬುಡಕಟ್ಟು ಜನರು ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಸೋಲಿಗ, ಬೆಟ್ಟಕುರುಬ, ಜೇನುಕುರುಬ, ಮೇದ, ಕಣಿಯನ್, ನಾಯಕ, ಡುಂಗ್ರಿಗೇರೆಸಿಯಾ ಮುಂತಾದ ಪರಿಶಿಷ್ಟ ಬುಡಕಟ್ಟು ಸಮುದಾಯಗಳು ಕಂಡುಬರುತ್ತಾರೆ.

**ಅಧ್ಯಯನದ ಗುರಿ ಮತ್ತು ಉದ್ದೇಶಗಳು**

1. ಚಾಮರಾಜನಗರ ಜಿಲ್ಲೆಯಲ್ಲಿರುವ ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು
2. ಸೋಲಿಗ ಬುಡಕಟ್ಟು ಜನರು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಸೂಕ್ತ ಸಲಹೆಗಳನ್ನು ನೀಡುವುದು.

**ಅಧ್ಯಯನದ ಪ್ರಾಮುಖ್ಯತೆ**

1. ಬುಡಕಟ್ಟು ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ತಿಳಿಸುತ್ತದೆ.
2. ಬುಡಕಟ್ಟು ಜನರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಅವಲೋಕನ ವಿಧಾನ, ಸಂದರ್ಶನ ವಿಧಾನ, ಕುಟುಂಬ

ಸಮೀಕ್ಷೆ, ಗುಂಪು ಚರ್ಚೆ ಮುಂತಾದ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ರಾಜ್ಯ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಜಿಲ್ಲಾ ಆರ್ಥಿಕ ಮತ್ತು ಸಾಂಖ್ಯಿಕ ಕಛೇರಿ, ವಿವಿಧ ಗ್ರಂಥಾಲಯ ಹಾಗೂ ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ದೊರೆಯುವ ದಾಖಲೆಗಳು, ವರದಿಗಳು, ಪ್ರಕಟಿತ ಗ್ರಂಥಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ಲೇಖನಗಳು ಮತ್ತು ಅಂತರ್ಜಾಲ ಮೂಲಗಳಿಂದ ಸಂಗ್ರಹಿಸಿದ್ದೇನೆ.

**ಮಾದರಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯಲ್ಲಿ ನೆಲೆಸಿರುವ 50 ಸೋಲಿಗ ಬುಡಕಟ್ಟು ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**ಫಲಿತಾಂಶ ಮತ್ತು ಚರ್ಚೆಗಳು**

ಸೋಲಿಗರು ಕರ್ನಾಟಕದ ಪ್ರಮುಖ ಬುಡಕಟ್ಟು ಜನಾಂಗಗಳಲ್ಲಿ ಒಂದಾಗಿದ್ದು, ತಮ್ಮದೇ ಆದ ಆಚಾರ, ವಿಚಾರ, ಸಾಂಪ್ರದಾಯಿಕ ಪದ್ಧತಿಯೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಇವರು ಜಿಲ್ಲೆಯಲ್ಲಿ ಮಹದೇಶ್ವರಬೆಟ್ಟ, ಬಿಳಿಗಿರಿರಂಗನಬೆಟ್ಟ, ಗೋಪಾಲಸ್ವಾಮಿಬೆಟ್ಟ ಮತ್ತು ಬಂಡಿಪುರ ಅರಣ್ಯ ಮತ್ತು ಅರಣ್ಯದಂಚಿನ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಸೋಲಿಗರು ವಾಸಿಸುವ ಸ್ಥಳಗಳನ್ನು ಪೋಡು ಅಥವಾ ಹಾಡಿ ಎಂಬುದಾಗಿ ಕರೆಯುತ್ತಾರೆ. ಸೋಲಿಗರಲ್ಲಿ ಪ್ರಮುಖವಾಗಿ ಐದು ಕುಲದ ಸೋಲಿಗ ಮತ್ತು ಏಳು ಕುಲದ ಸೋಲಿಗ ಎಂಬ ಉಪಪಂಗಡಳಿವೆ.

**ಕೋಷ್ಟಕ 1: ಲಿಂಗವಾರು ಪ್ರತಿಕ್ರಿಯಾರ್ಥಿಗಳ ವಿವರ**

| ವಿವರ | ವಯೋಮಾನ | ಒಟ್ಟು | |
|---|---|---|---|
| | | ಆವೃತ್ತಿ | ಶೇ. |
| 1. | ಪುರುಷ | 39 | 78.0 |
| 2. | ಮಹಿಳೆ | 11 | 22.0 |
| | **ಒಟ್ಟು** | **50** | **100.00** |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 1ರಲ್ಲಿ ಲಿಂಗವಾರು ಪ್ರತಿಕ್ರಿಯಾರ್ಥಿಗಳ ವಿವರವನ್ನು ನೀಡಲಾಗಿದ್ದು, ಅತ್ಯಂತ ಹೆಚ್ಚು ಅಂದರೆ ಶೇ.78 ಪುರುಷರು ಅಧ್ಯಯನದಲ್ಲಿ ಭಾಗಿಯಾಗಿದ್ದಾರೆ. ಬುಡಕಟ್ಟು ಜನರಲ್ಲಿ ಇಂದಿಗೂ ಕೂಡ ನಾಚಿಕೆ, ಸಂಕೋಚ, ಕೀಳರಿಮೆ ಸ್ವಭಾವಗಳಿದ್ದು, ಸೋಲಿಗರಲ್ಲಿ ತುಸು ಹೆಚ್ಚೇ ಇದೇ ಹಾಗಾಗಿ ಮಹಿಳೆಯರು ಮಾಹಿತಿ ನೀಡಲು ಹಿಂಜರಿಯುತ್ತಾರೆ.

**ಕೋಷ್ಟಕ 2: ಪ್ರತಿಕ್ರಿಯಾರ್ಥಿಗಳ ವಯೋಮಾನದ ವಿವರ**

| ವಿವರ | ವಯೋಮಾನ | ಒಟ್ಟು | |
|---|---|---|---|
| | | ಆವೃತ್ತಿ | ಶೇ. |
| 1. | 25 ವರ್ಷಕ್ಕಿಂತ ಕಡಿಮೆ | 9 | 18.0 |
| 2. | 26–45 ವರ್ಷ | 18 | 36.0 |
| 3. | 46–60 | 16 | 32.0 |
| 4. | 60 ವರ್ಷ ಮೇಲ್ಪಟ್ಟವರು | 7 | 14.0 |
| | **ಒಟ್ಟು** | **50** | **100.0** |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 2ರಲ್ಲಿ ಪ್ರತಿಕ್ರಿಯಾರ್ಥಿಗಳ ವಯೋಮಾನದ ವಿವರವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಶೇ.18ರಷ್ಟು ಮಂದಿ 25 ವರ್ಷಕ್ಕಿಂತ ಕೆಳಗಿನವರಾಗಿದ್ದು, ಶೇ.36ರಷ್ಟು ಮಂದಿ 26–45 ವಯೋಮಾನದವರಾಗಿದ್ದಾರೆ. ಇನ್ನುಳಿದಂತೆ ಶೇ.32ರಷ್ಟು 46–60 ಮತ್ತು ಶೇ 14ರಷ್ಟು ಮಂದಿ 7 ವರ್ಷ ಮೇಲ್ಪಟ್ಟವರಾಗಿದ್ದಾರೆ.

**ಕೋಷ್ಟಕ 3: ಬುಡಕಟ್ಟು ಜನರ ವೈವಾಹಿಕ ಸ್ಥಾನಮಾನ**

| ವಿವರ | ವೈವಾಹಿಕ ಸ್ಥಾನಮಾನ | ಆವೃತ್ತಿ | ಒಟ್ಟು |
|---|---|---|---|
| 1 | ವಿವಾಹಿತರು | 38 | 76.0 |
| 2 | ಅವಿವಾಹಿತರು | 6 | 12.0 |
| 3 | ವಿಧವೆ/ವಿಧುರ | 2 | 4.0 |
| 4 | ವಿಚ್ಛೇಧನ/ಪ್ರತ್ಯೇಕ ವಾಸ | 4 | 8.8 |
| | **ಒಟ್ಟು** | **50** | **100.0** |

**ಮೂಲ: ಕ್ಷೇತ್ರಕಾರ್ಯ**

ವಿವಾಹವು ಪ್ರಮುಖ ಸಾಮಾಜಿಕ ಸಂಸ್ಥೆಗಳಲ್ಲಿ ಒಂದಾಗಿದ್ದು, ಕೋಷ್ಟಕ 3ರಲ್ಲಿ ಬುಡಕಟ್ಟು ಜನರ ವೈವಾಹಿಕ ಸ್ಥಾನಮಾನವನ್ನು ತೋರಿಸಲಾಗಿದೆ. ಪಟ್ಟಿಯ ಪ್ರಕಾರ ಅತ್ಯಂತ ಹೆಚ್ಚು ಅಂದರೆ ಶೇ.78ರಷ್ಟು

ಬುಡಕಟ್ಟು ಜನರು ವಿವಾಹಿತರಾಗಿದ್ದು, ಅವಿವಾಹಿತರ ಸಂಖ್ಯೆ ಶೇ.12ರಷ್ಟಿದೆ. ಇನ್ನುಳಿದಂತೆ ಶೇ.4.0ರಷ್ಟು ವಿಧವೆಯರಿದ್ದರೆ, ಶೇ.8.8ರಷ್ಟು ಮಂದಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ.

**ಕೋಷ್ಟಕ 4: ಪ್ರತಿಕ್ರಿಯಾರ್ಥಿಗಳ ಶೈಕ್ಷಣಿಕ ವಿವರ**

| ವಿವರ | ವಯೋಮಾನ | ಒಟ್ಟು | |
|---|---|---|---|
| | | ಆವೃತ್ತಿ | ಶೇ. |
| 1. | ಅನಕ್ಷರಸ್ಥರು | 17 | 34.0 |
| 2. | ಪ್ರಾಥಮಿಕ | 11 | 22.0 |
| 3. | ಮಾಧ್ಯಮಿಕ | 13 | 26.0 |
| 4. | ಪ್ರೌಢಶಿಕ್ಷಣ | 5 | 10.0 |
| 5. | ಪಿಯುಸಿ | 1 | 2.0 |
| 6. | ಪದವಿ ಮತ್ತು ಪದವಿ ಮೇಲ್ಪಟ್ಟು | 3 | 6.0 |
| | **ಒಟ್ಟು** | **50** | **100.0** |

**ಮೂಲ: ಕ್ಷೇತ್ರಕಾರ್ಯ**

ಯಾವುದೇ ಒಂದು ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಅಥವಾ ಬದಲಾವಣೆಯನ್ನು ತಿಳಿದುಕೊಳ್ಳುವಲ್ಲಿ ಆ ಸಮುದಾಯದ ಶೈಕ್ಷಣಿಕ ಸ್ಥಾನಮಾನ ಪ್ರಮುಖ ಪಾತ್ರವಹಿಸುತ್ತದೆ. ಬುಡಕಟ್ಟು ಸಮುದಾಯಗಳ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಇತರ ಸಮುದಾಯಗಳಿಗಿಂತ ಭಿನ್ನವಾಗಿದ್ದು, ಸಾಕ್ಷರತೆ ಮತ್ತು ಶೈಕ್ಷಣಿಕ ಮಟ್ಟವೂ ಸಹ ಕಡಿಮೆ ಪ್ರಮಾಣದಲ್ಲಿರುವುದನ್ನು ಕಾಣುತ್ತೇವೆ.

ಕೆಳಮಟ್ಟದ ಸಾಕ್ಷರತೆ ಮತ್ತು ಬುಡಕಟ್ಟು ಪ್ರದೇಶಗಳಲ್ಲಿರುವ ಬಹಳಷ್ಟು ಶಾಲೆಗಳಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಅಧಿಕವಿದೆ. ಪ್ರಾಥಮಿಕ ಶಿಕ್ಷಣದ ಮೊದಲ 3 ರಿಂದ 4 ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ, ಇಲ್ಲವೇ ಹಾಜರಾಗುವುದಿಲ್ಲ. ಇದರಿಂದ ಮಕ್ಕಳು ಅನಕ್ಷರಸ್ಥರಾಗಿ ಉಳಿದು ಬಿಡುತ್ತಾರೆ. ಕೋಷ್ಟಕ 4ರಲ್ಲಿ ಪ್ರತಿಕ್ರಿಯಾರ್ಥಿಗಳ ಶೈಕ್ಷಣಿಕ ವಿವರವನ್ನು ನೀಡಲಾಗಿದೆ. ಅದರಂತೆ ಅತ್ಯಂತ ಹೆಚ್ಚು ಜನರು (ಶೇ.34.0) ಅನಕ್ಷರಸ್ಥರಾಗಿದ್ದು, ಶೇ22.0ರಷ್ಟು ಮಂದಿ ಪ್ರಾಥಮಿಕ ಮತ್ತು ಶೇ.26 ಮಾಧ್ಯಮಿಕ ಹಾಗೂ ಶೇ.10ರಷ್ಟು ಜನರು ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಶೇ.2ರಷ್ಟು ಪಿಯು ಮತ್ತು ಶೇ.6ರಷ್ಟು ಪದವಿ ಶಿಕ್ಷಣವನ್ನು ಪೂರೈಸಿರುವುದು ಬುಡಕಟ್ಟು ಸಮುದಾಯಗಳ ಬದಲಾವಣೆಯ ಸೂಚಕವಾಗಿದೆ.

**ಕೋಷ್ಟಕ 5: ಬುಡಕಟ್ಟು ಕುಟುಂಬಗಳ ವಾರ್ಷಿಕ ಆದಾಯದ ವಿವರ**

| ವಿವರ | ಆದಾಯ | ಆವೃತ್ತಿ | ಶೇ. |
|---|---|---|---|
| 1 | 10, 000 ಕ್ಕಿಂತ ಕಡಿಮೆ | 4 | 8.0 |
| 2 | 10000–20,000 | 15 | 30.0 |
| 3 | 20000–30,000 | 21 | 22.0 |
| 4 | 30,000–40.000 | 4 | 8.0 |
| 5 | 40,000 ಕ್ಕಿಂತ ಹೆಚ್ಚು | 9 | 18.0 |
| | **ಒಟ್ಟು** | **50** | **100.0** |

**ಮೂಲ: ಕ್ಷೇತ್ರಕಾರ್ಯ**

ಕುಟುಂಬದ ಆದಾಯವು ಯಾವುದೇ ಒಂದು ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಅಧ್ಯಯನಕ್ಕೊಳಪಡಿಸಿರುವ ಎಲ್ಲಾ ಕುಟುಂಬಗಳ ಆದಾಯ 50 ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗುರುತಿಸಲಾಗಿದೆ. ಮೇಲಿನ ಕೋಷ್ಟಕದ ಪ್ರಕಾರ ಅತ್ಯಂತ ಹೆಚ್ಚಿನ ಕುಟುಂಬಗಳು ಅಂದರೆ ಶೇ.30ರಷ್ಟು ಕುಟುಂಬಗಳು 10,000–20,000 ಆದಾಯವನ್ನು ಹೊಂದಿದ್ದಾರೆ. ಇನ್ನುಳಿದಂತೆ ಶೇ.8ರಷ್ಟು ಕುಟುಂಬಗಳು 10 ಸಾವಿರಕ್ಕಿಂತ ಕಡಿಮೆ, ಅಷ್ಟೇ ಪ್ರಮಾಣದ ಕುಟುಂಬಗಳು 30,000–40,000 ಆದಾಯವನ್ನು ಹೊಂದಿದ್ದು, ಶೇ.18ರಷ್ಟು ಕುಟುಂಬಗಳು 40,000ಕ್ಕಿಂತ ಹೆಚ್ಚು ಆದಾಯವನ್ನು ಹೊಂದಿವೆ.

**ಕೋಷ್ಟಕ 6: ಕುಟುಂಬದ ಮುಖ್ಯಸ್ಥರ ವೃತ್ತಿಯ ವಿವರ**

| ವಿವರ | ಉದ್ಯೋಗ | ಆವೃತ್ತಿ | ಶೇ. |
|---|---|---|---|
| 1 | ಕೂಲಿ | 31 | 62.0 |
| 2 | ವ್ಯವಸಾಯ | 11 | 22.0 |
| 3 | ಕಿರು ಉತ್ಪನ್ನ ಸಂಗ್ರಹ | 8 | 16.0 |
| 4 | ಸರ್ಕಾರಿ ಉದ್ಯೋಗ | – | – |
| 5 | ಖಾಸಗಿ ಉದ್ಯೋಗ/ಸ್ವಯಂ ಉದ್ಯೋಗ | – | – |
| 6 | ಇತರೆ | – | – |
| | **ಒಟ್ಟು** | **50** | **100.0** |

**ಮೂಲ: ಕ್ಷೇತ್ರಕಾರ್ಯ**

ಉದ್ಯೋಗ ಮತ್ತು ಆದಾಯ ಒಂದೇ ನಾಣ್ಯದ ಎರಡು ಮುಖಗಳು. ಇವೆರಡು ಸಹ ಒಂದು ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಪ್ರಸ್ತುತ ಅಧ್ಯಯನಕ್ಕೊಳಪಟ್ಟಿರುವ ಬಹುತೇಕ ಎಲ್ಲಾ ಕುಟುಂಬಗಳು ಕೂಡ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಕೋಷ್ಟಕದ ಪ್ರಕಾರ ಶೇ.62ರಷ್ಟು ಕುಟುಂಬಗಳು ಜೀವನ ನಿರ್ವಹಣೆಗಾಗಿ ಕೃಷಿಕೂಲಿ ಮತ್ತು ಇತರ ಅಸಂಘಟಿತ ವಲಯವನ್ನು ಅವಲಂಬಿಸಿಕೊಂಡಿದ್ದು, ಶೇ.22.ರಷ್ಟು ವ್ಯವಸಾಯವನ್ನು ಅವಲಂಬಿಸಿಕೊಂಡಿದ್ದಾರೆ. ಶೇ.16ರಷ್ಟು ಕುಟುಂಬಗಳು ಅರಣ್ಯದಲ್ಲಿ ದೊರೆಯುವ ಕಿರು ಉತ್ಪನ್ನಗಳ ಸಂಗ್ರಹವನ್ನೇ ಆದಾಯದ ಪ್ರಮುಖ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಸೋಲಿಗರು ತಮ್ಮ ಜೀವನ ನಿರ್ವಹಣೆಗಾಗಿ ಕೂಲಿ, ವ್ಯವಸಾಯದ ಜೊತೆಗೆ ಜೇನು, ಪಾಸೆ, ನೆಲ್ಲಿಕಾಯಿ, ಅರಳೆಕಾಯಿ, ಅಂಟುವಾಳ, ಹೊಂಗೆಬೀಜ, ಮಾಗ್ಲಿಬೇರು, ಜೇನುಮೇಣ, ಮರದಮೇಣ, ಹೊಂಗೆಬೀಜ, ಬೂರದಹತ್ತಿ, ಮಾವಿನಕಾಯಿ, ಸೀಬೆಕಾಯಿ ಮುಂತಾದ 20ಕ್ಕೂ ಹೆಚ್ಚು ಅರಣ್ಯದಲ್ಲಿ ಸಿಗುವ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಲ್ಯಾಂಪ್ಸ್ ಸೊಸೈಟಿಗೆ ಮಾರಾಟ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ.

ಇದಲ್ಲದೆ ಕುರಿ, ಮೇಕೆ, ದನ ಮುಂತಾದ ಪ್ರಾಣಿಗಳನ್ನು ಸಾಕುತ್ತಾರೆ. ಮೂಲತಃ ಕೃಷಿಕರಾದ ಸೋಲಿಗರು ಹಿಂದೆ ಒಂದೆಡೆ ಕೃಷಿ ಮಾಡದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಹಿಸುತ್ತಿದ್ದರು. ಇದನ್ನು ಕೆತ್ಲು ಅಥವಾ ಕುಮರಿ ಬೇಸಾಯ ಎಂದು ಕರೆಯುತ್ತಿದ್ದರು. ಮಳೆ ಬಂದ ತಕ್ಷಣ ಗುದ್ದಲಿ ಮತ್ತು ಪಿಕಾಶಿಗಳಿಂದ ಹದ ಮಾಡಿ ರಾಗಿ, ತೊಗರಿ, ಮುಸುಕಿನ ಜೋಳ, ಅವರೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಆದರೆ ಇತ್ತೀಚಿಗೆ ಇಂತಹ ಬೇಸಾಯ ಪದ್ಧತಿ ಕಣ್ಮರೆಯಾಗಿದ್ದು, ಸರ್ಕಾರದಿಂದಲೇ ಕೃಷಿ ಭೂಮಿಯನ್ನು ಹಾಗೂ ನೆಲೆಸಲು ವಸತಿ ಸೌಕರ್ಯವನ್ನು ಕಲ್ಪಿಸಿ ಒಂದೆಡೆ ಬೇಸಾಯ ಮಾಡಲು ಅನುವು ಮಾಡಿಕೊಡಲಾಗಿದೆ.

ಸರ್ಕಾರ ಕೊಟ್ಟಿರುವ ಜಮೀನಿನಲ್ಲಿ ಬಹುತೇಕ ಸೋಲಿಗರು ವ್ಯವಸಾಯ ಮಾಡುತ್ತಿದ್ದಾರೆ. ಕೆಲವರು ಮಾತ್ರ ಕಾಡು ಪ್ರಾಣಿಗಳ ಹಾವಳಿ ಮತ್ತು ಕೃಷಿಯ ಮೇಲಿನ ನಿರಾಸಕ್ತಿಯಿಂದಾಗಿ ತಮ್ಮ ಜಮೀನನ್ನು ಕೇರಳ, ತಮಿಳುನಾಡಿನಿಂದ ಬಂದವರಿಗೆ ಎಕರೆಗೆ 4 ರಿಂದ 6 ಸಾವಿರ ರೂಗಳಿಗೆ ಗುತ್ತಿಗೆ ನೀಡಿ ತಮ್ಮ ಜಮೀನಿನಲ್ಲಿ ತಾವೇ ಕೂಲಿಗಳಾಗಿ ದುಡಿಯುತ್ತಾ ಕೂಲಿಯನ್ನೇ ತಮ್ಮ ಜೀವನದ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಜೊತೆಗೆ ಸ್ಥಳೀಯವಾಗಿ ಕೂಲಿ ಸಿಗದ ಕಾರಣ ನೆರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ಕಾಣಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಬೆರಳೆಣಿಕೆಯಷ್ಟು ಮಂದಿ ಅರಣ್ಯ ಇಲಾಖೆಯಲ್ಲಿ ಮಾವುತರಾಗಿ, ಗಾರ್ಡ್‌ಗಳಾಗಿ, ವಾಚರ್‌ಗಳಾಗಿ ದುಡಿಯುತ್ತಿದ್ದು, ಇವರಲ್ಲಿ ಕೆಲವರು ಕೆಲವರು ಖಾಯಂ ನೌಕರರಾಗಿದ್ದರೆ, ಕೆಲವರು ದಿನಗೂಲಿ ನೌಕರರಾಗಿ ದುಡಿಯುತ್ತಿದ್ದಾರೆ. ಆದರೆ ಪ್ರಸ್ತುತ ಅಧ್ಯಯನಕ್ಕೊಳಪಡಿಸಿರುವ ಕುಟುಂಬಗಳಲ್ಲಿ ಯಾರೂ ಕೂಡ ಸರ್ಕಾರಿ ಅಥವಾ ಅರೆಸರ್ಕಾರಿ ನೌಕರಿಯಲ್ಲಿರುವುದನ್ನು ಕಾಣಬಹುದಾಗಿದೆ.

**ಉಪಸಂಹಾರ**

ಮೇಲಿನ ಅಂಶಗಳನ್ನು ಗಮನಿಸಿದಾಗ ಸೋಲಿಗ ಬುಡಕಟ್ಟು ಜನರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಕಾಣಬಹುದಾಗಿದೆ. ಇವರು ಇಂದಿಗೂ ಕೂಡ ಬಡತನ, ಅನಕ್ಷರತೆ, ನಿರುದ್ಯೋಗ, ವಲಸೆ, ಶೋಷಣೆ ಮುಂತಾದ ಸಮಸ್ಯೆಗಳ ಜೊತೆಗೆ ಅನಾರೋಗ್ಯದ ಸಮಸ್ಯೆಗಳಿಂದಲೂ ಬಳಲುತ್ತಿದ್ದಾರೆ. ಹಾಗಾಗಿ ಸರ್ಕಾರವು ಇವರ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಗಾಗಿ ನವೀನ ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ ಈಗಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿರುವುದು ಅನಿವಾರ್ಯವಾಗಿದೆ. ಪ್ರಸ್ತುತ ಸಾಂಕ್ರಾಮಿಕ ರೋಗದ ಸಮಸ್ಯೆಯಿಂದಾಗಿ ಮಕ್ಕಳ ವಿದ್ಯಾಭ್ಯಾಸ ಮೊಟಕುಗೊಂಡು ಮಧ್ಯಂತರದಲ್ಲಿ ಶಾಲೆ ತೊರೆಯುವವರ ಪ್ರಮಾಣ ಹೆಚ್ಚಿದೆ ಹಾಗೂ ಕಲಿಕಾ ಸಮಸ್ಯೆಗಳಿಂದಾಗಿ ಮುಂದಿನ ತರಗತಿಗಳಿಗೆ ಹಾಜರಾಗದೇ ಗೈರು ಹಾಜರಾಗುತ್ತಿರುವುದನ್ನು ಕೂಡ ಕಾಣಬಹುದಾಗಿದೆ. ಈ ಸಮಸ್ಯೆಗಳ ನಿವಾರಣೆಗೆ ವಿವಿಧ ವಿಶೇಷ ಯೋಜನೆಗಳನ್ನು ರೂಪಿಸುವುದು ಅಗತ್ಯವಾಗಿದೆ. ನಿರುದ್ಯೋಗ ಸಮಸ್ಯೆ ಮಿತಿ ಮೀರಿದ್ದು, ಕುಟುಂಬ ನಿರ್ವಹಣೆಗೆ ಸಾಕಿರುವ ದನ–ಕರು–ಕುರಿಗಳನ್ನು ಮಾರಿದರೂ ಸಾಲದೇ ಸಾಲದ ಸುಳಿಯಲ್ಲಿ ಸಿಲುಕಿ ನಲಗುತ್ತಿದ್ದಾರೆ. ಖಾಸಗಿ ಫೈನಾನ್ಸ್ ಕಂಪನಿಗಳು ಸೂಕ್ತ ಸಮಯಕ್ಕೆ ಸಾಲ ಪಾವತಿಸದ ಕುಟುಂಬಗಳನ್ನು ಶೋಷಿಸುತ್ತಿವೆ. ಈ ಸಮಸೆಯ ನಿವಾರಣೆಗೆ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಅಗತ್ಯ ಕ್ರಮಗಳನ್ನು ರೂಪಿಸಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಆಂದೋಲನ (1992), ಮಲೈ ಮಕ್ಕಳು ಸೋಲಿಗರ ಪೋಡುಗಳಲ್ಲಿ, ಅನಾಥತೆ: ವಿಚಾರಗಳ ಸುಳಿವು. ಮೈಸೂರು.
- ಚಂದ್ರಪ್ಪ. ಬಿ. ಎನ್. (1990). ಸೋಲಿಗರ ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಕೃಷ್ಣ ಅಯ್ಯಂಗಾರ್. ಡಿ., (1956). ಕನ್ನಡನಾಡಿನ ಆದಿವಾಸಿಗಳು, ವಾರ್ತ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು.
- ಮಂಜುನಾಥ ಬೆಂಡರವಾಡಿ. (2010). ಚಾಮರಾಜ ನಗರ ಜಿಲ್ಲೆಯ ಆದಿವಾಸಿಗಳು: ಒಂದು ಪಕ್ಷಿನೋಟ. ಇಲ್ಲಿ ಮಧು ಗುಂಡ್ಲುಪೇಟೆ (ಸಂ). ಬುಡಕಟ್ಟು ಲೇಖನಗಳು. ಅಕ್ಷತಾ ಪ್ರಕಾಶನ. ಮೈಸೂರು.
- Anantha Krishnan Iyer L.A.K., (1981). The Tribes and Castes of Cochin, Cosmo Publications, New Delhi.

- Brinks, D. (2006). The rule of (Non) Law. In Gretchen Helmke and Steven Levitsky (ed.) Informal Institutions and Democracy in Latin America. Baltimore, Johns Hopkins, pp 201-226.
- Buchanan. F. (1807). A Journey from Madras through the countries of Mysore, Canara and Malabar. Oxford University Press, New Delhi
- Census of India (2011). Chamarajamagara District Census Handbook.
- Gandhi, Malli. (2008). Denotified Tribes; Dimensions of change, Kanishka Publication, New Delhi.
- Ghurye. G.S. (1963). The scheduled tribes, popular press Ltd, Bombay
- Singh. K.S. (2003), Soligaru, In People of India-Scheduled Tribes, Oxford University Press, New Delhi
- Guralingaiah. M. (1997). Purity and Pollution among Kodu Gollas, Samaja Shodhana Journal of Mangalore Sociology Association,Vol. 16, No.2.
- Thurston E. (1909). Castes and Tribes of Southern India. Vol-III, Madras Govt. Press, Madras.
- Vidyarthi, L.P. and Roy B.K. (1976). Tribal Culture of India, Concept Publishing house, New Delhi.